# ಭಾಗ್ಯಾದ ಲಕ್ಷ್ಮೀ ಬಾರಮ್ಮ

ತಮ್ಮ ಮನೆಯ ಮಾವಿನ ಮರದಲ್ಲಿ ಬಿಟ್ಟ ಮಾವಿನಹಣ್ಣುಗಳನ್ನು ವಿತರಣೆ ಮಾಡಲು ಅಂಬಾಬಾಯಿ ತಮ್ಮ ಮನೆಯ ಸಮೀಪದಲ್ಲಿದ್ದ ರಮಾದೇವಿ ಅವರ ಮನೆಗೆ ಹೋದರು. ಅಲ್ಲೇನು ಆಶ್ಚರ್ಯ! ಸುಗುಣಾಬಾಯಿ, ಸುಭದ್ರಮ್ಮ ಎಲ್ಲಾ ಅಲ್ಲೇ ಕೂತಿದ್ದಾರೆ. ಅವರುಗಳ ಮಧ್ಯದಲ್ಲಿ ಹತ್ತಿ ಕಾರ್ಖಾನೆಯೋ ಎಂಬಂತೆ ಕಾಳು ಬಿಡಿಸಿದ ಹತ್ತಿ, ಹೂ ಬತ್ತಿ, ಮಂಗಳಾರತಿ ಬತ್ತಿ, ಗೆಜ್ಜೆ ವಸ್ತ್ರಗಳು ಎಲ್ಲಾ ಒಪ್ಪವಾಗಿ ಇರಿಸಲ್ಪಟ್ಟಿವೆ! ಅವರು ಇನ್ನೂ ಕಮಲದ ಬತ್ತಿ, ಪವಿತ್ರದ ಬತ್ತಿ ಅಂತ ಬತ್ತಿಗಳನ್ನು ಮಾಡುತ್ತಲೇ ಇದ್ದಾರೆ.

"ಏನ್ರೀ ಇದು, ಹತ್ತಿ ಬತ್ತಿ ರಾಶಿ?" ಕೇಳಿದರು ಅಂಬಾಬಾಯಿ.

"ಇನ್ನೇನು ಬಂತಲ್ಲಾ ಹಬ್ಬಗಳ ಸಾಲು, ಅದಕ್ಕೇ ಸಿದ್ಧತೆ ಮಾಡಿಕೊಳ್ತಾ ಇದ್ದೀವಿ. ಸುಭದ್ರಮ್ಮನಿಗೆ ಶ್ರಾವಣಮಾಸದಲ್ಲಿ ಸಂಪತ್ತು ಶುಕ್ರವಾರ, ಶನಿವಾರ ಅಂತ ಇನ್ನೂ ಕೆಲವು ಹಬ್ಬಗಳು, ಪೂಜೆಗಳು ಜಾಸ್ತಿ. ಅದಕ್ಕೇ ಆಮೇಲೆ ಪುರುಸೊತ್ತು ಆಗಲ್ಲ ಅಂದ್ರು. ಒಂದೇ ಕಡೆ ಆದರೆ ನಾವೂ ಸ್ವಲ್ಪ ಸಹಾಯ ಮಾಡಬಹುದು ಅವರಿಗೆ. ಅದಕ್ಕೇ..." ಅಂದರು ರಮಾದೇವಿ.

"ಸಂಪತ್ತು ಶುಕ್ರವಾರದ ಲಕ್ಷ್ಮೀ, ಕಲಶ ನಿಮಗಿಲ್ಲವಾ?" ಕೇಳಿದರು ಅಂಬಾಬಾಯಿ.

"ಅದೆಲ್ಲಾ ನಮ್ಮ ತಾಯಿಮನೆಯಲ್ಲಿದೆ, ಅತ್ತೆ ಮನೆಯಲ್ಲಿಲ್ಲ, ನಮಗೆ ವರಮಹಾಲಕ್ಷ್ಮಿ ವ್ರತ ಮಾತ್ರ ಇದೆ." ಎಂದು ರಮಾದೇವಿ ಅಂದದ್ದೇ ತಡ ಪಕ್ಕದ ಕೋಣೆಯಲ್ಲಿ ಸ್ವೆಟರ್ ಹೆಣೆಯುತ್ತಿದ್ದ ರಮಾದೇವಿಯವರ ಸೊಸೆ ಗೀತಾ ಹಾರಿ ಬಂದು "ಹಾಗಾದರೆ ಅತ್ತೆ, ನೀವು ಬೇರೆ ಜಾತಿಯವರಾ?" ಎಂದು ಕಣ್ಣು ಮಿಟುಕಿಸಿ ಅತ್ತೆಯನ್ನು ಛೇಡಿಸಿದಳು. ಸ್ನೇಹಿತೆಯರಂತೆ ಅತ್ತೆ ಸೊಸೆ ಇದ್ದುದರಿಂದ ರಮಾದೇವಿ ಹುಸಿಗೋಪ ತೋರಿ "ಸುಮ್ಮನೆ ಇರೇ" ಎಂದು ಗದರಿದಂತೆ ಮಾಡಿದರು.

"ಒಂದೇ ಪಂಗಡದವರಾದರೂ, ಸಂಪ್ರದಾಯದಲ್ಲಿ ಯಾಕೆ ಭಿನ್ನತೆ?" ಗೀತಾ ಕೇಳಿಯೇಬಿಟ್ಟಳು. ಸ್ವಲ್ಪ ಮೌನದ ನಂತರ ಅಂಬಾಬಾಯಿಯೇ ಮಾತಾಡಿದರು; ಅದೆಲ್ಲಾ ದೇಶಾಚಾರ. ನೂರಾರು ವರ್ಷಗಳ ಹಿಂದೆ ಮಹಾರಾಷ್ಟ್ರದಿಂದ ಬೇರೆಬೇರೆ ಪ್ರಾಂತ್ಯಗಳಿಗೆ ವಲಸೆಹೋದ ಜನ ತಮ್ಮ ತಮ್ಮ ಸಂಪ್ರದಾಯಗಳನ್ನೂ, ಸಂಸ್ಕೃತಿಯನ್ನೂ ಇನ್ನೂ ಉಳಿಸಿಕೊಂಡಿರುವ ದ್ಯೋತಕವೇ ಈ ಪೂಜೆಗಳು. ಪೂಜೆಗೆ ಕಳೆಕಟ್ಟುವುದಕ್ಕೋಸ್ಕರ ಲಕ್ಷ್ಮೀ ಪೂಜೆಗೆ ಒತ್ತು ಬರುವಹಾಗೆ ಕಥೆಗಳನ್ನು ಹಾಡಿನರೂಪದಲ್ಲಿ ಕಟ್ಟಿ ಹಾಡುತ್ತಾರೆ.

ಅದೇನೇ ಇರಲಿ, ಲಕ್ಷ್ಮೀದೇವಿಯನ್ನು ಕೇವಲ ಸಿರಿ, ಸೌಭಾಗ್ಯದಾಯಿನಿ, ಸಂತಾನದಾಯಿನಿ ಎಂದಿಷ್ಟೇ ತಿಳಿಯದೆ ಇನ್ನೂ ಹೆಚ್ಚಿನ ಜ್ಞಾನವನ್ನು ಸಂಪಾದಿಸಿಕೊಂಡು ಪೂಜಿಸಿದರೆ ದೇವಿಯಲ್ಲಿ ನಮ್ಮ ಗೌರವ, ಭಕ್ತಿ, ಶ್ರದ್ಧೆ ಹೆಚ್ಚಾಗುತ್ತದೆ ಅಲ್ಲವಾ?

ಇವರ ಸಂಭಾಷಣೆ ಕೇಳಿಸಿಕೊಳ್ಳುತ್ತಾ ಮಗಳ ಲಂಗಕ್ಕೆ ಕಸೂತಿ ಹಾಕುತ್ತಿದ್ದ ರಮಾದೇವಿಯವರ ಎರಡನೇ ಸೊಸೆ ಮುಕ್ತಾ ತಾನೂ ಬಂದು ಗೀತಾಳ ಪಕ್ಕದಲ್ಲಿ ಕುಳಿತಳು. "ನೀವು ಹೇಳೋದು ಸರಿ. ಆದರೆ ಅದರ ಬಗ್ಗೆ ಮಾಹಿತಿ ಎಲ್ಲಿ ಸಿಗುತ್ತೆ?" ಕುತೂಹಲದಿಂದ ಕೇಳಿದಳು ಮುಕ್ತಾ.

ಅದಕ್ಕೇನು, ನಿಮ್ಮತ್ತೆಯನ್ನು ಕೇಳಿದರೆ ಹೇಳ್ತಾರೆ. ಸೊಸೆಯರಿಬ್ಬರೂ ಅತ್ತೆ ಮುಖ ನೋಡಿದರು.
ನನಗೇನೂ ತುಂಬಾ ಗೊತ್ತಿಲ್ಲಪ್ಪ. ಆಗಾಗ ಪ್ರವಚನಗಳಲ್ಲಿ ಕೇಳಿದ್ದು ಅಷ್ಟೇ ಅಂದರು ರಮಾದೇವಿ.

ಸುಗುಣಾಬಾಯಿ ಹೇಳಿದರು: "ಆಗಾಗ ಕೇಳಿದ್ದೀವಿ, ಓದಿದ್ದೀವಿ, ಆದರೆ ಅಲ್ಲಿಷ್ಟು ಇಲ್ಲಿಷ್ಟು ಅನ್ನುವಹಾಗೆ ಆಗಿದೆ. ಒಟ್ಟು ಏನು ಅಂತ ಕೇಳಿದರೆ ಹೇಳಲಿಕ್ಕೆ ಬರುವುದಿಲ್ಲ". ಆಗ ಸುಭದ್ರಮ್ಮ ಅಂಬಾಬಾಯಿಯನ್ನುದ್ದೇಶಿಸಿ: "ನೀವಾದರೆ ನಿತ್ಯ ಭಜನಾ ಮಂಡಳಿ, ಉಪನ್ಯಾಸಗಳು, ಪ್ರವಚನಗಳಿಗೆ ಹೋಗುತ್ತಲೇ ಇರುತ್ತೀರ. ನೀವೇ ಹೇಳಿಬಿಡಿ" ಅಂದರು.

“ಸುಮ್ಮನಿರಿ, ನೀವು ಅಂದುಕೊಂಡಹಾಗೆ ಏನೂ ಇಲ್ಲ. ಗೀತಾ, ಮುಕ್ತಾ ಅಂಥಹಾ ಚಿಕ್ಕವರು ಕೇಳಿದರೆ ಇಲ್ಲ ಅನ್ನದಹಾಗೆ ಸ್ವಲ್ಪ ಹೇಳಬೇಕು ಅಷ್ಟೆ.” ಅಂದರು ಅಂಬಾಬಾಯಿ.

“ಹೇಳಿ, ಹೇಳಿ, . . .” ಎಲ್ಲರೂ ಅಂಬಾಬಾಯಿಗೆ ಒತ್ತಾಯಿಸಿದರು.

**ವರಮಹಾಲಕ್ಷ್ಮಿ** ಅಂದರೆ ವರ = ಶ್ರೇಷ್ಠಳಾದಂತಹ, ಮಹಾ = ಮಹಿಮಾವಂತಳಾದ ಅಂದರೆ ತನ್ನ ಮಹಿಮೆಗಳಿಂದಲೇ ಶ್ರೇಷ್ಠಳಾದಂತಹ ಲಕ್ಷ್ಮೀ. ವರದ ಮಹಾಲಕ್ಷ್ಮಿ ಎಂದೂ ಹೇಳುವುದುಂಟು.

ಸೃಷ್ಟಿಯ ಆದಿಯಿಂದ ಹೇಳುತ್ತೀನಿ. ಪ್ರಳಯಕಾಲದಲ್ಲಿ ಬರೀ ನೀರಿತ್ತು. ಅದು ಲಕ್ಷ್ಮಿದೇವಿಯ ಶ್ರೀದೇವಿ ಎಂಬ ರೂಪ. ನೀರಿನ ಮೇಲೆ ಒಂದು ಆಲದ ಎಲೆ. ಅದು ಲಕ್ಷ್ಮಿದೇವಿಯ ಭೂದೇವಿ ಎಂಬ ರೂಪ. ಕತ್ತಲೆ ಲಕ್ಷ್ಮಿದೇವಿಯ ದುರ್ಗಾದೇವಿ ಎಂಬ ರೂಪ. ಆಲದೆಲೆಯ ಮೇಲೆ ಶಿಶುರೂಪದ ಶ್ರೀಹರಿ.

ರಮಾದೇವಿ ಕೇಳಿದರು: “ರೀ, ಭಗವಂತನನ್ನು, ಕೋಟಿಸೂರ್ಯಪ್ರಭಾ ಎನ್ನುತ್ತಾರೆ, ಹಾಗಿದ್ದಾಗ ಅವನಿರುವ ಕಡೆ ಕತ್ತಲು ಅಂದರೆ ಏನು?”

ಇಲ್ಲಿ ಕತ್ತಲು ಎಂದರೆ ಸೂರ್ಯನ ಅಭಾವದಿಂದ ಉಂಟಾದ ಕತ್ತಲಲ್ಲ. (ಆ ಸಮಯದಲ್ಲಿ ಇನ್ನೂ ಸೂರ್ಯನ ಸೃಷ್ಟಿ ಆಗಿರಲಿಲ್ಲ.) ವೇದಾದಿ ಜ್ಞಾನಗಳು ಭಗವಂತನ ಬುದ್ಧಿಯೊಳಗೆ ಸುಪ್ತವಾಗಿತ್ತು. ಅದನ್ನೇ ಕತ್ತಲು ಅಂದರು.

ಅಲ್ಲಿ ಲಕ್ಷ್ಮೀ ನಾರಾಯಣರ ಹೊರತು ಬೇರೇನೂ ಇಲ್ಲ. ಸೃಷ್ಟಿಕಾಲ ಬಂದಾಗ ಪುರುಷರೂಪದ ಭಗವಂತ ಮಹಾಲಕ್ಷ್ಮಿಯ ಆಲಿಂಗನದಿಂದ ಹೊರಬಂದು ಅಸಂಖ್ಯರೂಪಗಳನ್ನು ಪಡೆದುಕೊಳ್ಳುತ್ತಾನೆ. ಮಹಾಲಕ್ಷ್ಮಿಗೂ ಹಾಗೆಯೇ ಅಸಂಖ್ಯ ರೂಪಗಳನ್ನು ಪಡೆಯಲು ಆದೇಶಿಸುತ್ತಾನೆ. ಅದರಂತೆ ಭಗವಂತನ ಒಂದೊಂದು ರೂಪಕ್ಕೂ ತನ್ನದೊಂದು ರೂಪವನ್ನು ಜೋಡಿ ಮಾಡುತ್ತಾಳೆ. ಉದಾಹರಣೆ: ಶ್ರೀಧರ + ಶ್ರೀಧನ್ಯಾ, ವಾಮನ + ಶ್ರೀವೃಷಾಕಪಿ, ಇತ್ಯಾದಿ.

“ರೀ ಅಂಬಾಬಾಯಿ, ವಾಮನ ಬ್ರಹ್ಮಚಾರಿ. ಹೆಂಡತಿ ಎಲ್ಲಿಂದ ಬಂದಳು?” ಸುಗುಣಾಬಾಯಿ ಕೇಳಿದರು. ಅಂಬಾಬಾಯಿ ಮುಗುಳುನಕ್ಕು ಇಲ್ಲಿ ಕೇಳಿ:

*ಸರ್ವಸಂಗವ ಬಿಟ್ಟು ಸನ್ಯಾಸಿಯಾದ ಕಾಲಕ್ಕೂ ।*
*ಸರ್ವದಾ ತನ್ನೆದೆಯ ಮೇಲೆ ಬಿಡದೆ ನಿನ್ನ ಧರಿಸಿಪ್ಪಂತೆ ॥*
*ಮರಳುಮಾಡಿಕೊಂಡೆಯಲ್ಲೇ ಮಾಯಾದೇವಿ ।*

ಈಗೇನ್ಹೇಳ್ತೀರಿ? ಲಕ್ಷ್ಮೀನಾರಾಯಣರಿಗೆ ವಿಯೋಗ, ವಿರಹ ಎನ್ನುವುದು ಇಲ್ಲವೇ ಇಲ್ಲ.

ಗೀತಾ ಬಾಯಿಹಾಕಿದಳು: ರಾಮಾಯಣದಲ್ಲಿ ಸೀತಾಪಹರಣವಾದಮೇಲೂ ಹೀಗನ್ನುತ್ತೀರಾ? ಅದಕ್ಕೆ, ಅಂಬಾಬಾಯಿ: ಅದನ್ನ ಆಮೇಲೆ ಹೇಳುತ್ತೀನಿ, ಇರು ಎಂದು ಮುಂದುವರಿಸಿದರು.

ಆಮೇಲೆ ಜಡ ವಸ್ತುಗಳ ಸೃಷ್ಟಿ, ಬ್ರಹ್ಮಾಂಡಗಳ ಸೃಷ್ಟಿಯಾಗಬೇಕಲ್ಲ. ಕಚ್ಚಾವಸ್ತು ಬೇಕು. ತಾನೇ ಆ ಕಚ್ಚಾವಸ್ತುವನ್ನು ಲಕ್ಷ್ಮೀದೇವಿಯ ಹೊಟ್ಟೆಯೊಳಗೆ ಇಟ್ಟು “ಕೊಡು” ಎನ್ನುತ್ತಾನೆ ಹರಿ. ಆಗ **ಸತ್ವ, ರಜೋ, ತಮೋ** ಗುಣಗಳನ್ನು ತೆಗೆದುಕೊಡುತ್ತಾಳೆ. ಸತ್ವಕ್ಕೆ ಶ್ರೀರೂಪ, ರಜಸ್ಸಿಗೆ ಭೂರೂಪ ಮತ್ತು ತಮಸ್ಸಿಗೆ ದುರ್ಗಾರೂಪಗಳೇ ಅಭಿಮಾನಿ ರೂಪಗಳಾದವು. ಆ ಮೂರು ಗುಣಗಳನ್ನು ಬೇರೆಬೇರೆ ಪ್ರಮಾಣಗಳಲ್ಲಿ ಮಿಶ್ರಮಾಡಿ **ಅವ್ಯಕ್ತ ತತ್ವ** ಮಾಡಿ ಸೃಷ್ಟಿಸಿದ್ದೇ ಬ್ರಹ್ಮಾಂಡ ಮತ್ತು ಅದರೊಳಗಿನ ಜಡವಸ್ತುಗಳು. ಇಡೀ ಜಗತ್ತಿಗೆ ಬೇಕಾದ ಕಚ್ಚಾವಸ್ತುಗಳನ್ನು ತನ್ನ ಉದರದಲ್ಲಿ ಧರಿಸಿದ್ದರಿಂದ ಅವಳಿಗೆ “**ಮಹದ್ಬ್ರಹ್ಮ**” ಅಂತ ಹೆಸರು. ಆದದ್ದರಿಂದಲೇ ಮೂಲ ಅವ್ಯಕ್ತ ತತ್ವಕ್ಕೆ ಅಭಿಮಾನಿ ಲಕ್ಷ್ಮೀ.

ಸರಿ ಬ್ರಹ್ಮಾಂಡ ಸೃಷ್ಟಿಯಾಯಿತು. ಶ್ರೀಹರಿ ಕೂರ್ಮರೂಪ ಧರಿಸಿದ. ಲಕ್ಷ್ಮಿಯೂ ಕೂರ್ಮರೂಪದಿಂದ ಭಗವಂತನ ಬೆನ್ನ ಮೇಲೆ ಕುಳಿತು ಬ್ರಹ್ಮಾಂಡ ಹೊತ್ತಳು. ಶ್ರೀಹರಿಯಂತೆಯೇ ಲಕ್ಷ್ಮಿಯೂ ಸರ್ವವ್ಯಾಪ್ತಳು, ಕಾಲಾತೀತಳು. ಈ ವಿಷಯಗಳಲ್ಲಿ ಅವನಂತೆಯೇ ಆದದ್ದರಿಂದ ಅವಳಿಗೆ “**ಸಮನಾ**” ಎನ್ನುವ ಹೆಸರು. ಅವನಷ್ಟು ಗುಣಪೂರ್ಣಳಲ್ಲದ್ದರಿಂದ “**ಅಸಮನಾ**” ಎಂತಲೂ ಹೆಸರು. ಶ್ರೀಹರಿಯ ನಾಭಿಯಿಂದ ಕಮಲೋತ್ಪತ್ತಿಯಾಯಿತು.

ಆ ಕಮಲ ಯಾರು? ಭೂದೇವಿಯೇ. ಅದರಲ್ಲಿ ಬ್ರಹ್ಮೋತ್ಪತ್ತಿ. ನಾವಿರುವ ನೆಲಕ್ಕೂ(ಭೂಮಿಗೂ) ಭೂದೇವಿಯ ಹೆಸರೇ. ಅದಕ್ಕೇ ಅವಳು **ಜಗದಂಬೆ.** ಶ್ರೀ ಲಕ್ಷ್ಮೀದೇವಿಗೆ ಜನನ ಮರಣಗಳಿಲ್ಲ. ಆದದ್ದರಿಂದ ಅನಾದಿನಿತ್ಯಳು. ಕ್ಷರ ಅಂದರೆ ನಷ್ಟ. **ಅಕ್ಷರ** ಅಂದರೆ ದೇಹಹಾನಿ ಇಲ್ಲದವಳು. ಮುಪ್ಪೂ ಇಲ್ಲ. ಅದರಿಂದ **ಅಜರ.**

ಈ ಬಾರಿ ಮುಕ್ತಾ ಬಾಯಿಹಾಕಿದಳು: ''ಕ್ಷೀರಸಮುದ್ರದಲ್ಲಿ ಹುಟ್ಟಿಬಂದಳು ಅಂತ ಕೇಳಿದ್ದೀನಿ''.

ಅದು ಬ್ರಹ್ಮ ರುದ್ರಾದಿ ದೇವತೆಗಳಿಗೆ ಮನೋರಂಜನೆ ಕೊಡಲಿಕ್ಕೆ ಲಕ್ಷ್ಮೀನಾರಾಯಣರು ಮಾಡಿದ ನಾಟಕ. [ಸಮುದ್ರದಿಂದ ಬರುವಾಗಲೇ ಮಾಂಗಲ್ಯ ಅವಳ ಕೊರಳಲ್ಲಿತ್ತು, ಅಂದರೆ ಮುಂಚೆಯೇ ಮದುವೆ ಆಗಿತ್ತು ಅಂತ ಅಲ್ಲವಾ.]

ಈಗ ದೇವತೆಗಳು, ದೈತ್ಯರು ಎಲ್ಲಾ ಹುಟ್ಟಿ ಆಯಿತು. ಶ್ರೀಹರಿ ಹೇಳುತ್ತಾನೆ ''ಎಲ್ಲಾ ಕಾಲದಲ್ಲಿಯೂ ಜೀವೋತ್ಪತ್ತಿ ಸಮಯದಲ್ಲಿ ಸಕಲ ಜೀವರಲ್ಲಿ (ಮನುಷ್ಯ, ಪಶು, ಪಕ್ಷಿ ಇತ್ಯಾದಿ) ಪುರುಷನಂತೆ ತಂದೆಯಾಗಿ ಬೀಜವನ್ನು ನಾನು ಬಿತ್ತುತ್ತೇನೆ. ಸ್ತ್ರೀಯಲ್ಲಿ ಲಕ್ಷ್ಮೀ ಕ್ಷೇತ್ರವಾಗಿ ಧಾರಣ ಮಾಡುತ್ತಾಳೆ.

ಶ್ರೀಹರಿಗೆ ತನ್ನ ಸ್ವರೂಪದಿಂದಲೇ ಆಭರಣಗಳೂ, ಆಯುಧಗಳೂ ಇವೆ. ಆದರೂ ಲಕ್ಷ್ಮೀದೇವಿಯು ತನ್ನ ಪ್ರೀತ್ಯರ್ಥವಾಗಿ ತಾನೇ ಸಕಲಾಭರಣಗಳಾಗಿ, ಪೀತಾಂಬರವಾಗಿ ಅವನನ್ನು ಅಲಂಕರಿಸಿದ್ದಾಳೆ. ಶ್ರೀಯಾಗಿ ಶಂಖ, ಭೂವಾಗಿ ಪದ್ಮ, ದುರ್ಗಾ ಆಗಿ ಚಕ್ರದಲ್ಲಿದ್ದಾಳೆ.

ತಕ್ಷಣ ಸುಗುಣಾಬಾಯಿ ''ಗೊತ್ತು, ಗೊತ್ತು ..

*ಛತ್ರ ಚಾಮರ ವ್ಯಜನ ಪರ್ಯಂಕ*

*ಪಾತ್ರರೂಪದಲ್ಲಿ ನಿಂತು*

*ಚಿತ್ರ ಚರಿತನಾದ ಹರಿಯ ನಿತ್ಯಸೇವೆ ಮಾಡುತಿಹಳು* ... ಹಾಡಿದರು ಸುಗುಣಾಬಾಯಿ.

ತಾನೇ ಅಡಿಗೆಮಾಡಿ ಆ ವ್ಯಂಜನಗಳೂ ತಾನೇ ಆಗಿ ಹರಿಯ ಸೇವೆಮಾಡುತ್ತಿದ್ದಾಳೆ. ಅವನು ಉಂಡುಬಿಟ್ಟ ಸಾರವನ್ನು ಅವಳು ಊಟಮಾಡುತ್ತಾಳೆ.

ಇಷ್ಟಾದರೂ ಅವಳಿನ್ನೂ ಶ್ರೀಹರಿಯ ಗುಣಗಳನ್ನು ಪೂರ್ತಿಯಾಗಿ ತಿಳಿದಿಲ್ಲವಂತೆ! ಪ್ರತಿ ಕ್ಷಣದ ಕಾಲಾಂಶದ ಸಮಯದಲ್ಲೂ ಹರಿಯ ಅನುಗ್ರಹದಿಂದ ಹೊಸಹೊಸ ಗುಣಗಳನ್ನು ತಿಳಿಯುತ್ತಲೇ ಇದ್ದಾಳಂತೆ. ಬ್ರಹ್ಮಾದಿಗಳು ತಿಳಿದಿರುವ ಹರಿಯ ಗುಣಗಳ ಕೋಟ್ಯಾವಧಿ ಸಂಖ್ಯೆಯಷ್ಟು ಅಧಿಕಾವಧಿ ಗುಣಗಳನ್ನು ಲಕ್ಷ್ಮೀದೇವಿ ತಿಳಿದಿರುವಳಂತೆ. ಅಷ್ಟೇ ಅಲ್ಲ, ಬ್ರಹ್ಮಾದಿಗಳು ತಿಳಿಯದೇ ಇರುವ ಒಂದೊಂದು ಗುಣವನ್ನೂ ಸೂಕ್ಷ್ಮಾತಿ ಸೂಕ್ಷ್ಮವಾಗಿ ತಿಳಿದಿದ್ದಾಳೆ. ಪರಮಾತ್ಮನ ಗುಣಾತಿಶಯಗಳನ್ನು ಇನ್ನೂ ಎಳೆಎಳೆಯಾಗಿ (ವಿವರವಾಗಿ) ತಿಳಿಯುವುದಕ್ಕಾಗಿ ಭಗವಂತನನ್ನು ಪ್ರಾರ್ಥನೆಮಾಡಲು ಮಹೀದಾಸರೂಪಿ ಹರಿಯು ತಾನೇ ತನ್ನ ಗುಣವಿಶೇಷಗಳ ಉಪದೇಶವನ್ನು ದೇವಿಗೆ ಮಾಡಿದ್ದಾನಂತೆ. ಅಂದರೆ ಅವಳಿಗೆ ಗುರುವೂ ಹರಿಯೇ. ಹಾಗಾಗಿ ಲಕ್ಷ್ಮೀದೇವಿಯನ್ನು ಬ್ರಹ್ಮಾದಿಗಳು ಪೂರ್ಣವಾಗಿ ತಿಳಿಯಲು ಶಕ್ತರಲ್ಲ. ಯಾಕೆಂದರೆ ಬ್ರಹ್ಮಾದಿಗಳ ಜ್ಞಾನಾಭಿವೃದ್ಧಿ ಮುಕ್ತಿಯನ್ನು ಪಡೆಯುವವರೆಗೆ ಮಾತ್ರ. ಆದರೆ ಲಕ್ಷ್ಮೀದೇವಿ ನಿತ್ಯಮುಕ್ತಳಾಗಿಯೂ ನೂತನ ಜ್ಞಾನಾಭಿವೃದ್ಧಿಯನ್ನು ಪಡೆಯುತ್ತಲೇ ಇದ್ದಾಳೆ ಯಾಕೆಂದರೆ ಆನಂದೋದ್ರೇಕಕ್ಕಾಗಿ. ಎಷ್ಟೋ ಬ್ರಹ್ಮರು ಮತ್ತು ಎಷ್ಟೋ ರುದ್ರರುಗಳನ್ನು ಸೃಷ್ಟಿಗೆ ತಂದು ಮುಕ್ತಿಗೆ ಕಳಿಸಿದ್ದಾಳೆ. ಹಾಗಾಗಿ ಬ್ರಹ್ಮರುದ್ರಾದಿಗಳಿಗಿಂತಲೂ ಎಷ್ಟು ಶ್ರೇಷ್ಠಳು ಎಂದು ಹೇಳುವುದು ಅನವಶ್ಯಕ. ಪರಮಾತ್ಮನ ಅನಂತರ ಹದಿನಾಲ್ಕು ಲೋಕಗಳಲ್ಲಿ ಇವಳೇ ಸರ್ವಜ್ಞೆ.

ತನ್ನಲ್ಲಿ ಲಕ್ಷ್ಮೀದೇವಿ ಇಟ್ಟಿರುವ ಆಳವಾದ ಶ್ರದ್ಧಾ ಭಕ್ತಿಗೆ ಮೆಚ್ಚಿ ಅವಳ ಒಂದು ಕಡೆಗಣ್ಣ ನೋಟದಿಂದಲೇ ಸೃಷ್ಟ್ಯಾದಿ ಅಷ್ಟಕರ್ಮಗಳು ಆಗುವಂತೆ ಅನುಗ್ರಹಿಸಿದ್ದಾನೆ ಪರಮಾತ್ಮ. ಹರಿಯಂತೆ ಇವಳಿಗೂ ಗರ್ಭವಾಸಾದಿ ಷಡೂರ್ಮಿಗಳು ಇಲ್ಲ. ಸೀತಾ, ರುಕ್ಮಿಣಿ, ಪದ್ಮಾವತಿಯಾಗಿ ಅವತರಿಸಿದ್ದಾಗ ಮಾತ್ರ ಬಾಲ್ಯ, ಯೌವನಾವಸ್ಥೆಗಳನ್ನು ಪ್ರದರ್ಶಿಸಿದ್ದಾಳೆ ಅಷ್ಟೆ. ಸ್ವರೂಪತಃ ಹೇಗೆ ಜ್ಞಾನಾನಂದಮಯವಾದ ಅಪ್ರಾಕೃತ ಶರೀರವೋ ಹಾಗೆಯೇ ಚಿರ ಯೌವನೆಯೇ. ಸೌಂದರ್ಯದಲ್ಲಿಯೂ ಅನುಪಮ ಸುಂದರಿ.

ದೇವರು ರಾಮನಾದಾಗ ಸೀತೆ, ಕೃಷ್ಣನಾಗಿದ್ದಾಗ ರುಕ್ಮಿಣಿ – ಈ ಎರಡೇ ತಾನೆ ಲಕ್ಷ್ಮೀ ಅವತಾರಗಳು? ಸುಭದ್ರಮ್ಮ ಸಂದೇಹ ಪರಿಹಾರಮಾಡಿಕೊಂಡರು. ಹೌದು, ಕೃಷ್ಣನಾಗಿದ್ದಾಗ ಲಕ್ಷ್ಮೀ ಸನ್ನಿಧಾನಯುಕ್ತರಾದವರೇ ಆದ 16,106 ಜನ ಪತ್ನಿಯರು. ಇನ್ನಿಬ್ಬರಲ್ಲಿ ಒಬ್ಬಳು ರುಕ್ಮಿಣಿ, ಇನ್ನೊಬ್ಬಳು ಅವಳದೇ ರೂಪವಾದ ಸತ್ಯಭಾಮ. ಲಕ್ಷ್ಮೀ ಸಾನ್ನಿಧ್ಯವಿಲ್ಲದ ಸ್ತ್ರೀಯನ್ನು ಶ್ರೀಹರಿ ಭಾರ್ಯೆಯಾಗಿ ಸ್ವೀಕರಿಸಲಾರ. ಅದಕ್ಕೇ ತುಲಸಿ, ಬೃಂದಾ, ತ್ರಿವಕ್ರಾ ಮುಂತಾದ ಕೃಷ್ಣನ ಅಂಗಸಂಗ ಬಯಸಿದ ಗೋಪಿಕಾಸ್ತ್ರೀಯರು ಎಲ್ಲರಲ್ಲೂ ಲಕ್ಷ್ಮೀ ಸನ್ನಿಧಾನವಿರುತ್ತದೆ. ಲಕ್ಷ್ಮಿಯೂ ಅಣಿಮಾದಿ ಅಷ್ಟಸಿದ್ಧಿಗಳನ್ನು ಏಕಕಾಲದಲ್ಲಿ ತೋರಿಸಬಲ್ಲಳು. ಏಕಕಾಲದಲ್ಲಿ ಒಂದು ಅಣುವಿನಲ್ಲೂ ಇದ್ದಾಳೆ, ಇಡೀ ಬ್ರಹ್ಮಾಂಡದ ಆಚೀಚೆ ಕೂಡಾ ವ್ಯಾಪಿಸಿದ್ದಾಳೆ. ಜಾಗ್ರತ, ಸ್ವಪ್ನ, ಸುಷುಪ್ತಿ ಕಾಲಗಳಿಗೂ ನಿಯಾಮಕಳು. ಅವಳಿಗೂ ಸಹಸ್ರಾರು ಶಿರಸ್ಸು, ಬಾಹುಗಳು, ಪಾದಗಳು ಇತ್ಯಾದಿಯುಂಟು. ವೇದಗಳ ಕೆಲವು ಭಾಗ ಮಾತ್ರ ಹರಿಗೆ ಸೀಮಿತವಾದರೆ, ಮಿಕ್ಕ ಭಾಗಗಳು ಶ್ರೀ ಮತ್ತು ಹರಿ ಇಬ್ಬರಿಗೂ ಅನ್ವಯಿಸುತ್ತದೆ. ಇವಳು ವೇದಾಭಿಮಾನಿ, ವೇದ ಪ್ರತಿಪಾದ್ಯಳು.

ಹಾಗಾದರೆ ಲಕ್ಷ್ಮೀ ಮತ್ತು ನಾರಾಯಣರದೇ ಒಂದು ಗುಂಪು, ಬ್ರಹ್ಮಾದಿಗಳೆಲ್ಲಾ ಇನ್ನೊಂದು ಗುಂಪು ಅಂತ ಸ್ಪಷ್ಟವಾಯಿತಲ್ಲಾ. ಅಲ್ವೇನ್ರೀ ಸುಭದ್ರಮ್ಮ ಅಂತ ಸುಗುಣಾಬಾಯಿ ಅಂದರು. ತಲೆಹಾಕಿದರು ಸುಭದ್ರಮ್ಮ.

ಅಂಬಾಬಾಯಿ; ಸ್ವಲ್ಪ ತಾಳಿ, ಇಲ್ಲಿ ಕೇಳಿ, ಹರಿಯೊಬ್ಬನೇ ಈಶಕೋಟಿ (ಗುಂಪು), ಲಕ್ಷ್ಮೀಯಾದಿಯಾಗಿ ಎಲ್ಲ ಜೀವರೂ ಜೀವಕೋಟಿ.  ಯಾಕೆ ಹಾಗಂದರೆ ಅವನೊಬ್ಬನೇ ಸ್ವತಂತ್ರ. ಲಕ್ಷ್ಮೀ ಆದಿಯಾಗಿ ಸಕಲ ಜೀವರೂ ಅಸ್ವತಂತ್ರರು. ಪೂರ್ತಿಯಾಗಿ ಲಕ್ಷ್ಮೀ ಜೀವಕೋಟಿಯವಳೇ ಎಂದೂ ಹೇಳಲಿಕ್ಕೆ ಬರುವುದಿಲ್ಲ. ಯಾಕಂದರೆ, ಪರ–ಶುಕ್ಲತ್ರಯರು ಎಂಬ ಇನ್ನೊಂದು ಗುಂಪಿದೆ. ಅದು ಕೇವಲ ಮೂರು ಜನರ ಗುಂಪು. ಅದರಲ್ಲಿ ಲಕ್ಷ್ಮೀದೇವಿ, ಬ್ರಹ್ಮ(ವಾಯು) ಮತ್ತು ಸರಸ್ವತಿ(ಭಾರತಿ) ಅಷ್ಟೆ. ಗರುಡಾದಿ ಕೆಳಗಿನವರಾರೂ ಈ ಗುಂಪಿಗೆ ಸೇರಿಲ್ಲ.

ಅದೇನು ಆ ಗುಂಪಿನ ವೈಶಿಷ್ಟ್ಯ? ರಮಾದೇವಿ ಕೇಳಿದರು.

ಪರಮಾತ್ಮನ ಗುಣ, ಸಾಮರ್ಥ್ಯಾದಿಗಳಲ್ಲಿ ಅವರಿಗೆ ಎಂದೂ ದೋಷವಾಗಲೀ, ಸಂದೇಹವಾಗಲೀ, ಅಪನಂಬಿಕೆಯಾಗಲೀ ಬರುವುದಿಲ್ಲ. ಅದಕ್ಕೆ ಕಾರಣ: ಅಜ್ಞಾನ, ಸಂಶಯ, ವಿಪರೀತಜ್ಞಾನಗಳಿಗೆ ಕಲಿಯು ಅಧಿಪತಿ. ಅವನ ನೆರಳೂ ಸಹ ಈ ಮೂವರು ಇರುವ ದಿಕ್ಕಿಗೆ ತಲೆಹಾಕದು. ಹಾಗಾಗಿ ಅವರು ಶುಕ್ಲ(ಶುಭ್ರ)ತ್ರಯರು.

ಮಹಾಲಕ್ಷ್ಮೀದೇವಿ ಭಗವಂತನ ಮೊದಲನೇ ಪ್ರತಿಬಿಂಬ. ಅಷ್ಟರಲ್ಲೇ ಗೀತಾ "ಸ್ವಲ್ಪ ಬಿಡಿಸಿ ಹೇಳಿ ಅಂಬಾಬಾಯಿಯವರೇ" ಎಂದಳು. ಅಂಬಾಬಾಯಿ ತಕ್ಷಣ "ನೀನು ಅಲಂಕಾರಮಾಡಿಕೊಂಡು ನಿಲವುಗನ್ನಡಿ ಎದುರಿಗೆ ನಿಂತುಕೋ ಹೇಗೆ ಕಾಣಿಸುತ್ತೀ?" ಎಂದರು. ಗೀತಾ ಸ್ವಲ್ಪ ನಾಚಿಕೊಂಡು ಉತ್ತರಿಸಿದಳು: "ಚೆನ್ನಾಗಿ ಸುಂದರವಾಗಿ ಕಾಣಿಸುತ್ತೀನಿ". ಎಲ್ಲರೂ ಅವಳ ಮುಗ್ಧಮಾತಿಗೆ ನಕ್ಕರು.

ಅಂಬಾಬಾಯಿ ಮುಂದುವರಿಸಿದರು: ನೀನು ಸುಂದರಿ ಸರಿ. ಆದರೆ ಅದಲ್ಲಾ ನಾನು ಕೇಳಿದ್ದು. ನಿನ್ನ ಎಡ ಬಲವಾಗಿ, ಬಲ ಎಡವಾಗಿ ಕಾಣುತ್ತೆ. ನಿನ್ನ ಬೆನ್ನು ಕಾಣುತ್ತಾ? ಇಲ್ಲ. ನೀ ಮುಡಿದ ಹೂವಿನ ಪರಿಮಳ ಪ್ರತಿಬಿಂಬದ ಹೂವಿನಲ್ಲಿದೆಯಾ? ಇಲ್ಲ. ನೀನು ಹಾಡಿದರೆ ಪ್ರತಿಬಿಂಬದ ತುಟಿ ಅಲ್ಲಾಡುತ್ತದೆ. ಆದರೆ ಹಾಡು ಬರುವುದಿಲ್ಲ ಅಲ್ಲವೇ?

ಹೌದು ರೀ, ಇದನ್ನೆಲ್ಲಾ ನಾನು ಗಮನಿಸಿರಲೇ ಇಲ್ಲ ಅಂದಳು ಗೀತಾ.

ಅಂದರೆ ಬಿಂಬವಾದ ನಿನ್ನಲ್ಲಿರುವ ಎಲ್ಲಾ ಗುಣಗಳೂ ನಿನ್ನದೇ ಆದ ಪ್ರತಿಬಿಂಬದಲ್ಲಿ ಇಲ್ಲ ಅಂದಹಾಗೆ ಆಯಿತು. ಇದೇ ಬಿಂಬ ಪ್ರತಿಬಿಂಬ ಭಾವ. ಹರಿಯ ಗುಣಗಳಲ್ಲಿನ ಎಷ್ಟೋ ಗುಣಗಳು ಮಹಾಲಕ್ಷ್ಮಿಯಲ್ಲಿಲ್ಲ. ಲಕ್ಷ್ಮೀ ಹರಿಯ ಮೊದಲ ಸ್ತ್ರೀ ಪ್ರತಿಬಿಂಬ. ಬ್ರಹ್ಮ(ವಾಯು) ಶ್ರೀಹರಿಯ ಮೊದಲನೇ ಪುರುಷ ಪ್ರತಿಬಿಂಬ. ಲಕ್ಷ್ಮೀದೇವಿಗಿಂತಲೂ ಕಡಿಮೆ ಗುಣಗಳುಳ್ಳ ಪ್ರತಿಬಿಂಬ ಬ್ರಹ್ಮವಾಯುಗಳದ್ದು.

ಅಂಬಾಬಾಯಿ ನನ್ನದು ಒಂದೇ ಒಂದು ಸಂದೇಹ, ದಯವಿಟ್ಟು ತಪ್ಪು ತಿಳಿಯದೆ ಉತ್ತರ ಹೇಳಿ ಎನ್ನುತ್ತಾ ಮುಕ್ತಾ: ಲಕ್ಷ್ಮೀನಾರಾಯಣರು ಎಂದೂ ಜಗಳ ಆಡುವುದೇ ಇಲ್ಲವಾ? ಎಂದು ಕೇಳಿದಳು.

ಈ ಪ್ರಶ್ನೆ ನಮಗ್ಯಾರಿಗೂ ಹೊಳಿಯಲೇ ಇಲ್ಲವಲ್ಲ. ನಿನಗೆ ಹೇಗೆ . . . ? ಎನ್ನುತ್ತಾ ಅಂಬಾಬಾಯಿ ವಯಸ್ಸು ಹಾಗೆ ಅಷ್ಟೆ. ಪರವಾಗಿಲ್ಲ, ಹೇಳ್ತೀನಿ ಕೇಳು: ಲಕ್ಷ್ಮೀ ನಾರಾಯಣನ ದೇಹದ ಅವಿಭಾಜ್ಯ ಅಂಗದಂತೆಯೇ ಇದ್ದಾಳೆ (ಅರ್ಧನಾರಿಯಂತೆ). ಆದರೂ ಯಜ್ಞನಾಮಕ ಭಗವಂತನ ವಕ್ಷಸ್ಥಳದಲ್ಲಿ ದಕ್ಷಣಾನಾಮಕ ಲಕ್ಷ್ಮೀ ಸುಖ ವಿಷಯದಲ್ಲಿ ಅತ್ಯುತ್ಕೃಷ್ಟ ರೂಪ ಹೊಂದಿದ್ದಾಳೆ. ಹೀಗಿರುವಾಗ ಜಗಳ ಹೇಗೆ ಬರಬೇಕು ಹೇಳು. ಆದರೂ ಲೋಕದ ಜನರಿಗೆ ಒಂದು ಸಣ್ಣ ಮನೋರಂಜನೆಗಾಗಿ ಕೋಪಿಸಿಕೊಂಡು ಕೊಲ್ಹಾಪುರಕ್ಕೆ ಹೋದಂತೆ ನಾಟಕವಾಡುತ್ತಾಳಷ್ಟೆ. ಗೀತಾ ಈಗ ನಿನ್ನ ಹಳೇ ಪ್ರಶ್ನೆ ರಾಮಾಯಣದಲ್ಲಿ ಸೀತಾ ವಿಯೋಗಕ್ಕೆ ಉತ್ತರ ಸಿಕ್ಕಿತು ತಾನೆ?

ಯಾರನ್ನು ಬೇಕಾದರೂ ಬ್ರಹ್ಮರುದ್ರಾದಿ ಪದವಿಗಳಿಗೆ ಕೂಡಿಸುವ ಅಧಿಕಾರ ನನಗೆ ನನ್ನ ಪತಿ ಕೊಟ್ಟಿದ್ದಾನೆ ಅಂತ ಹೇಳಿ, ನಿಷ್ಕಾಮ ಕರ್ಮ ಮಾಡಿದವರನ್ನು ಮೋಕ್ಷಕ್ಕೆ ಶಿಫಾರಸು ಮಾಡುವ ಹಕ್ಕೂ ನನಗಿದೆ ಅಂತ ಲಕ್ಷ್ಮೀ ಹೇಳಿಕೊಂಡಿದ್ದಾಳೆ.

ಆದ್ದರಿಂದ, ಈ ಸಲ ವರಮಹಾಲಕ್ಷ್ಮೀ ಪೂಜೆ ಮಾಡುವಾಗ ಸಿರಿಗಾಗಿ ಶ್ರೀರೂಪವನ್ನೂ, ಸಂಸಾರ ಭಾರಣಕ್ಕಾಗಿ ಭೂರೂಪವನ್ನೂ, ನಮ್ಮಲ್ಲಿರುವ ತಮೋನಿಗ್ರಹಣಕ್ಕಾಗಿ ದುರ್ಗಾರೂಪವನ್ನೂ ಬೇಡಿಕೊಂಡು ಜೊತೆಗೆ ಮೋಕ್ಷವನ್ನೂ ಕೇಳೋಣ.

“ಹೊತ್ತಾಯಿತು, ನಾನಿನ್ನು ಹೊರಡುತ್ತೀನಿ” ಅಂದರು ಅಂಬಾಬಾಯಿ.

“ನಾವೂ ಹೊರಡುತ್ತೀವಿ, ಎಲ್ಲರಿಗೂ ಕುಂಕುಮ ಕೊಡಿ. ಇವತ್ತು ಸ್ವಾಮಿಕಾರ್ಯ ಸ್ವಕಾರ್ಯ ಎರಡೂ ಆಯಿತು. ಈ ಸಲದ ವರಮಹಾಲಕ್ಷ್ಮೀ ಪೂಜೆ ಹೆಚ್ಚು ಶ್ರದ್ಧಾ ಭಕ್ತಿ ಪೂರ್ವಕವಾಗುವುದು ನಿಸ್ಸಂದೇಹ ಅಲ್ಲವೇನ್ರೀ . . . ರಮಾದೇವಿ” ಎಂದು ಹೊರಟರು ಮುತ್ತೈದೆಯರು.

ಆಧಾರ: ಸತ್ತತ್ವರತ್ನಮಾಲಾ, ತತ್ವಸುವ್ವಾಲಿ, ಮಹಾಭಾರತ ತಾತ್ಪರ್ಯ ನಿರ್ಣಯ

ಈ ಲೇಖನದ ಬಗ್ಗೆ ತಮ್ಮ ಅನಿಸಿಕೆಯನ್ನು ಇಮೈಲ್ ಮುಖಾಂತರ ಇಲ್ಲವೇ ಅಂಚೆಯಲ್ಲಿ ಕಳುಹಿಸಿರಿ:

**ಲತಾ ನರಸಿಂಹ ರಾವ್**
23, ಪೆರುಮಾಳ್ ಕೋಯಿಲ್ ಸ್ಟ್ರೀಟ್,
ವೆಸ್ಟ್ ಮಾಂಬಳಂ, ಚೆನ್ನೈ 600 033.
ಫೋನ್: 044-2485 1192
ಇಮೈಲ್: snrao@qualitysystems.co.in